# ? ಕೇಳಿ ತಿಳಿಯಿರಿ ☆

ಈ ಬಾರಿ ಸಾಧಕರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿರುವವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ನಿತ್ಯಸ್ಥಾನಂದಜಿ. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ ಕೆಲವೇ ವಾಕ್ಯಗಳಲ್ಲಿ ಬರೆದು ಈ ಪತ್ರಿಕೆಯ ವಿಳಾಸಕ್ಕೆ ಕಳುಹಿಸಬಹುದು.

**? ಸೆಪ್ಟೆಂಬರ್ ೧೮೯೩ರಲ್ಲಿ ಅಮೆರಿಕದ ಚಿಕಾಗೋ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಜಗದ್ವಿಖ್ಯಾತರಾದ ನಂತರ ಸ್ವಾಮಿ ವಿವೇಕಾನಂದರು ಫೆಬ್ರವರಿ ೧೮೯೭ರಲ್ಲಿ ಭಾರತಕ್ಕೆ ವಾಪಸು ಬಂದು ಮದ್ರಾಸಿನಲ್ಲಿ (ಈಗಿನ ಚೆನ್ನೈ) ತಂಗಿದ್ದಾಗ ಸಂದರ್ಶಕರೊಬ್ಬರ "ಹಿಂದೂ ಧರ್ಮದಲ್ಲಿ ಅಷ್ಟೊಂದು ದೇವದೇವತೆಗಳೇಕೆ ಇದ್ದಾರೆ?" ಎಂಬ ಪ್ರಶ್ನೆಗೆ "ಏಕೆಂದರೆ ನಮ್ಮಲ್ಲಿ ಹಿಮಾಲಯ ಪರ್ವತವಿದೆ!" ಎಂದು ಉತ್ತರಿಸಿದ್ದರು. ಕೇಳಿದ ಪ್ರಶ್ನೆಗೆ ಇದು ಹೇಗೆ ಸಮಂಜಸ ಉತ್ತರವಾಗುತ್ತದೆ ಎಂಬುದನ್ನು ದಯವಿಟ್ಟು ವಿವರಿಸಿ.** –ಎನ್. ಗೋಪೀನಾಥ, ಶಿವಮೊಗ್ಗ

☆ ಸ್ವಾಮಿ ವಿವೇಕಾನಂದರು ಈ ಉತ್ತರವನ್ನು ಕೊಟ್ಟಾಗ ಅವರ ಮನಸ್ಸಿನಲ್ಲಿ ಏನಿತ್ತು ಎಂಬುದನ್ನು ನಾವು ಊಹಿಸಬೇಕಾಗುತ್ತದೆ. ಬಹುಶಃ ಅವರ ಅಭಿಪ್ರಾಯ ಹೀಗಿರಬಹುದು: ಹಿಮಾಲಯದ ಸೊಬಗು, ಅದರ ಭವ್ಯತೆ, ಅದರ ಧವಳ ಕಾಂತಿ ಹಿಂದೂಗಳನ್ನು ಕಲ್ಪನಾವಿಲಾಸದಲ್ಲಿ ತೊಡಗಿಸಿರಬಹುದು, ಹಲವು ಆಧ್ಯಾತ್ಮಿಕ ಅನುಭವಗಳನ್ನು ಅವರಲ್ಲಿ ಕೆರಳಿಸಿರಬಹುದು. ಈ ವಿವಿಧ ಕಲ್ಪನೆ ಮತ್ತು ಅನುಭವಗಳೇ ಹಲವಾರು ದೇವತೆಗಳ ಉಗಮಕ್ಕೆ ಕಾರಣವಾಗಿರಬಹುದು. ನಮಗೆ ತಿಳಿದಿರುವಂತೆ, ಹಿಂದೂಗಳಲ್ಲಿ ಕಲ್ಪನೆ ಕಲ್ಪನಾತೀತವಾಗಿ ಬೆಳೆಯುತ್ತ ಹೋಗುತ್ತದೆ. ಅವರು ಹೀಗೆ ಕಲ್ಪನಾಜೀವಿಗಳಾಗಲು ಹಿಮಾಲಯವೇ ಕಾರಣವಿರಬಹುದು. ಹಿಂದೂಗಳ ವಿವಿಧ ಧಾರ್ಮಿಕ ಕಲ್ಪನೆಗಳು ವಿವಿಧ ದೇವತೆಗಳಾಗಿ ಮೂರ್ತೀಭವಿಸಿವೆ ಎನ್ನಬಹುದು.

ಹಿಮಾಲಯದ ಭವ್ಯತೆ, ಅದರ ವೈವಿಧ್ಯಮಯ ದೃಶ್ಯಾವಳಿಗಳು ಹಿಂದೂಗಳನ್ನು ಅಂತರ್ಮುಖಿಗಳನ್ನಾಗಿ ಮಾಡಿತು. ತಮ್ಮ ಅಂತರಂಗದ ದಿವ್ಯತೆಯ ಸಾಕ್ಷಾತ್ಕಾರದಿಂದಾಗಿ ಎಲ್ಲವೂ ಅವರಿಗೆ ದಿವ್ಯವಾಗಿ ಕಂಡವು. ಹಾಗಾಗಿ ಹಿಮಾಲಯವೇ ಒಂದು ದೇವತೆಯಾಯಿತು, ಎಲ್ಲ ನದಿಗಳೂ ದೇವತೆಗಳಾದವು, ಪ್ರಕೃತಿ ಶಕ್ತಿಗಳೆಲ್ಲ ದೇವತೆಗಳಾದವು. ವಿಘ್ನವೂ ಒಂದು ದೇವತೆಯಾಗಿ ವಿಘ್ನೇಶ್ವರನ ಉದಯವಾಯಿತು, ಎಲ್ಲ ಮಂಗಳಗಳ ಪ್ರತಿನಿಧಿಯಾಗಿ ಶಿವನು ಬಂದನು, ಜ್ಞಾನವು ಸರಸ್ವತಿಯಾಯಿತು, ಧನ ಲಕ್ಷ್ಮಿಯಾಯಿತು, ಭೂಮಿ ಭೂತಾಯಿಯಾಯಿತು. ಹೀಗೆ ವಿವಿಧ ದೇವತೆಗಳ ಉದಯವಾಯಿತು.

**? ಪ್ರಪನ್ನಮೋಕ್ಷದಾನೇಽಹಂ ದೀಕ್ಷಿತೋ ಯವನೇಶ್ವರ । ಪತಿತಾನಾಂ ಮೋಕ್ಷದಾನೇ ಜಗನ್ನಾಥಃ ಪ್ರದೀಕ್ಷಿತಃ ॥ ದೇವರಲ್ಲಿ ಕೆಲವರನ್ನು (ಪ್ರಪನ್ನನಿಗೆ, ಪತಿತನಿಗೆ.. ಹೀಗೆ) ಮಾತ್ರ ಉದ್ಧರಿಸುವ ಶಕ್ತಿ ಎಂದಿದೆಯೆ? ತನ್ನ ಭಾವನೆ ಸಂಸ್ಕಾರ ಇತ್ಯಾದಿಗಳಿಗೆ ಅನುಗುಣವಾಗಿ ಒಬ್ಬ ವ್ಯಕ್ತಿಯು ಯಾವ ಒಂದು ನಾಮ ರೂಪವನ್ನೇ ಆರಿಸಿಕೊಂಡರೂ, ಆ ವ್ಯಕ್ತಿಯ ಸರ್ವತೋಮುಖ ಶುದ್ಧಿ (ಪಾವಿತ್ರ್ಯ) ಶ್ರೇಯಸ್ಸು ಪ್ರೇಯಸ್ಸುಗಳನ್ನು ಕರುಣಿಸುವ, ತನ್ನ ಕಂದಗಳೆಂದು ದಯೆಯಿಂದ ಪಾಲಿಸುವ ಒಂದು 'ತತ್ತ್ವ' ದೇವರು ಎಂದು ನಾನು ನಂಬಿದ್ದೇನೆ. ಆದರೆ ಮೇಲಿನ ಶ್ಲೋಕದಿಂದ ದೇವರಲ್ಲಿ ಹೀಗೆ ಬೇರೆ ಬೇರೆ ಶಕ್ತಿಗಳಿವೆ ಎಂಬ ಭೇದವುಂಟೆ? ಭ್ರಮೆಯುಂಟಾಗುತ್ತಿದೆ. ದಯಮಾಡಿ ತತ್ತ್ವವನ್ನು (ವಸ್ತುಸ್ಥಿತಿಯನ್ನು) ಮನದಟ್ಟು ಮಾಡಿಕೊಡುವಿರಾ?**

—ಡಾ. ಪ್ರಸನ್ನಾಕ್ಷಿ, ಮೈಸೂರು

☆ ಶ್ರೀರಾಮಕೃಷ್ಣರು ಹೇಳುತ್ತಾರೆ, "ಭಗವಂತನ ಕೃಪೆಯ ಗಾಳಿ ಯಾವಾಗಲೂ ಬೀಸುತ್ತಿರುತ್ತದೆ. ಆದರೆ ನಾವು ನಮ್ಮ ಹಡಗಿನ ಪಟವನ್ನು ತೆರೆಯಬೇಕಷ್ಟೆ!" ಹಡಗಿನ ಪಟವನ್ನು ತೆರೆಯುವುದೆಂದರೆ ಸಾಧನೆ ಮಾಡುವುದು. ನಮ್ಮ ವ್ಯಾಕುಲತೆಗನುಗುಣವಾಗಿ ಭಗವಂತನ ಕೃಪೆಯಾಗುತ್ತದೆ. ಪ್ರಪನ್ನನು ಎಂದರೆ ಪೂರ್ಣ ಶರಣಾಗತಿಯ ಭಾವ ಉಳ್ಳವನು, ಅಂದರೆ ಅಹಂಕಾರ ಇಲ್ಲದವನು. ಭಗವಂತನ ಕೃಪೆಯ ಹರಿಯುವಿಕೆಗೆ ತಡೆಯನ್ನು ಉಂಟುಮಾಡುವುದು ನಮ್ಮ ಅಹಂಕಾರ. ಇದರ ನಾಶವಾಯಿತೆಂದರೆ ಕೃಪೆಯು ಕೋಡಿಯೊಡೆದು ಹರಿಯುವುದು. ಆದರೆ ನಮಗೇ ಬಂಧಮುಕ್ತಿಯಲ್ಲಿ ತೀವ್ರ ಆಸಕ್ತಿ ಇಲ್ಲದಿದ್ದರೆ ಅವನಾದರೂ ಏನು ಮಾಡಿಯಾನು? ಕಂಬಕ್ಕೆ ಕಟ್ಟಿಹಾಕಿದ ವ್ಯಕ್ತಿಯೊಬ್ಬನು ಅದರಿಂದ ತಪ್ಪಿಸಿಕೊಳ್ಳಲು ತುಂಬ ಚಡಪಡಿಸುತ್ತಿದ್ದರೆ ಯಾರಾದರೂ ಒಂದು ಅವನ ಕಟ್ಟನ್ನು ಬಿಡಿಸಬಹುದು. ಅದಿಲ್ಲದೆ ಅವನು ಸುಮ್ಮನೆ ಇದ್ದರೆ ಯಾರೂ ಅವನ ಸಹಾಯಕ್ಕೆ ಬರುವುದಿಲ್ಲ. ಹಾಗೆಯೇ ನಮ್ಮಲ್ಲಿ ತೀವ್ರ

ಮುಮುಕ್ಷುತ್ವವಿದ್ದರೆ ಭಗವತ್ಸಹಾಯವೂ ಯಾವುದಾದರೂ ರೂಪದಲ್ಲಿ ಬಂದೇ ಬರುತ್ತದೆ. ಭಗವಂತನಿಗೆ ಎಲ್ಲರೂ ಪ್ರಿಯರೇ. ಆದರೆ ಯಾರಿಗೆ ಅವನು ನಿಜವಾಗಿಯೂ ಬೇಕೋ ಅವರಿಗೆ ದೊರೆಯುತ್ತಾನೆ.

**? ಗೋಹತ್ಯಾ ನಿಷೇಧದ ಬದಲು, ಒಟ್ಟಾರೆ ಪ್ರಾಣಿಹತ್ಯಾ ಪ್ರಾಣಿಬಲಿ ನಿಷೇಧಕ್ಕೆ ಆಂದೋಳನ ಆಗ್ರಹಗಳನ್ನು ಹಮ್ಮಿಕೊಂಡು ಸಸ್ಯಾಹಾರಕ್ಕೆ ಪಾರಮ್ಯ ದೊರಕಿಸಿ ಸಕಲ ಜೀವರಾಶಿಗಳಿಗೆ ಲೇಸನ್ನೇ ಬಯಸುವುದೇ ಒಳಿತಲ್ಲವೇನು?**

—ಮಹೇಶಕುಮಾರ್, ಹುಬ್ಬಳ್ಳಿ

☆ ಹಿಂದೂಗಳಿಗೆ ಗೋವು ಒಂದು ಪವಿತ್ರತೆಯ ಚಿಹ್ನೆ. ಹಿಂದೂಗಳ ಧಾರ್ಮಿಕ ಚಿಂತನೆಗಳಲ್ಲಿ ಅದು ಹಾಸುಹೊಕ್ಕಾಗಿದೆ. ಇದಕ್ಕೆ ಅನೇಕ ಐತಿಹಾಸಿಕ ಕಾರಣಗಳೂ ಇವೆ. ಹಿಂದೂಗಳು ಹಸುವಿನೊಂದಿಗೆ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದಾರೆ. ವಿಚಾರವಾದಿಗಳಿಗೆ ಇದು ಸರಿಕಾಣದೆ ಇರಬಹುದು. ಆದರೆ ಭಾವುಕತೆ ಮತ್ತು ಶ್ರದ್ಧೆ ಬರಿಯ ವಿಚಾರಕ್ಕೆ ತಲೆಬಾಗುವುದಿಲ್ಲ. ಮಾನವಜೀವನದಲ್ಲಿ ವೈಚಾರಿಕತೆಗೆ ಮಾತ್ರವಲ್ಲದೆ ಭಾವುಕತೆಗೂ ಒಂದು ಪ್ರಧಾನ ಸ್ಥಾನವಿದೆ. ಭಾವುಕತೆಗೆ ಪೋಷಣೆಯನ್ನು ನೀಡುವ ವಿಷಯಗಳಿಗೂ, ಅದರಿಂದ ಒಟ್ಟು ಸಮಾಜಕ್ಕೆ ಅಥವಾ ಇತರರಿಗೆ ಹಾನಿಯಾಗದಿದ್ದಲ್ಲಿ, ನಾವು ಅದಕ್ಕೆ ಪ್ರಾಧಾನ್ಯ ನೀಡಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಗೋಸಂರಕ್ಷಣೆ ತಪ್ಪು ಎಂದು ಹೇಳಲಾಗುವುದಿಲ್ಲ. ಭೂತದಯೆ ನಮ್ಮ ಧರ್ಮದ ಅತಿ ಮುಖ್ಯ ಅಂಶ. ಎಲ್ಲ ಪ್ರಾಣಿಗಳಿಗೂ ರಕ್ಷಣೆ ನೀಡಬೇಕು, ಸಕಲ ಜೀವರಾಶಿಗಳನ್ನೂ ರಕ್ಷಿಸಬೇಕು, ನಿಜ. ಗೋಸಂರಕ್ಷಣೆ ಮಾಡಬೇಕೆನ್ನುವವರು ಬೇರೆ ಪ್ರಾಣಿಗಳನ್ನು ಕಡೆಗಣಿಸುತ್ತಾರೆ ಎಂದು ಹೇಳಲಾಗುವುದಿಲ್ಲ.

**? 'ಹಂಸಕ್ಷೀರನ್ಯಾಯ' ಇದು ವೇದಸೂತ್ರವೇ ಆಗಿರುವಾಗ, ಆಯುರ್ವೇದದ ಕೆಲವೆಡೆ ಪ್ರಸ್ತಾಪಿತ ಪ್ರಾಣಿಗಳ ಮಾಂಸ ಮೂಳೆಗಳಿಂದ ಔಷಧ ತಯಾರಿಕೆಯನ್ನು ಪ್ರಶ್ನಿಸುವಂಥ ಸುಜ್ಞಾನವನ್ನು ನಾವು ಪ್ರದರ್ಶಿಸಿ ಒಳಿತನ್ನೇ ಆರಿಸಿಕೊಳ್ಳುವ ತತ್ತ್ವಸಿದ್ಧಾಂತಗಳಿಗೆ ಬದ್ಧರಾಗಬೇಕಿಲ್ಲವೇನು?**

—ಮಹೇಶಕುಮಾರ್, ಹುಬ್ಬಳ್ಳಿ

☆ 'ಹಂಸಕ್ಷೀರನ್ಯಾಯ'ವನ್ನು ನಮ್ಮ ನೈತಿಕ ಮತ್ತು ಆಧ್ಯಾತ್ಮಿಕ ಜೀವನಕ್ಕೆ ಅನ್ವಯಿಸಬೇಕು. ಜೀವನ ಎಂಬುದು ಒಳಿತು ಕೆಡಕುಗಳ ಮಿಶ್ರಣ. ಒಳಿತನ್ನು ಮಾತ್ರ ಆರಿಸಿಕೊಂಡು ಕೆಡಕನ್ನು ಬಿಟ್ಟುಬಿಡುವ ವಿವೇಕಬುದ್ಧಿ ಮತ್ತು ಮಾನಸಿಕ ಸ್ಥೈರ್ಯ ನಮಗಿರಬೇಕು. ಈಗಿನ ಸಾಮಾಜಿಕ ಸಂದರ್ಭದಲ್ಲಿ ಮಾಧ್ಯಮಗಳ ಮೂಲಕ ಹಲವಾರು ಪ್ರಭಾವಗಳು ನಮ್ಮ ಮೇಲೆ ಆಗುತ್ತಿರುತ್ತವೆ. ಇಲ್ಲಿ ನಾವು ಹಂಸಕ್ಷೀರನ್ಯಾಯವನ್ನು ಪ್ರಯೋಗಿಸಿ ನಮ್ಮ ನೆಲೆಯನ್ನು ಕಳೆದುಕೊಳ್ಳದೆ ಸುಸ್ಥಿರವಾದ ಆಧ್ಯಾತ್ಮಿಕ ತಳಹದಿಯ ಮೇಲೆ ನಮ್ಮ ನೈತಿಕ ಜೀವನದ ಕಟ್ಟಡವನ್ನು ನಿರ್ಮಾಣ ಮಾಡಬೇಕು. ಹಂಸಕ್ಷೀರನ್ಯಾಯವನ್ನು ಔಷಧಿ ಮುಂತಾದ ಸಾಮಾನ್ಯ ವಿಷಯಗಳಿಗೆ ಮಾತ್ರ ಅನ್ವಯಿಸುವುದು ಅಷ್ಟು ಉಚಿತವಲ್ಲ.

**? ಅಧ್ಯಾತ್ಮದ 'ಪರಂಜ್ಯೋತಿ' ಯೇ ಇರುವಾಗ ಜ್ಯೋತಿಷ್ಯದ ಪರಜ್ಯೋತಿಯ ಅಗತ್ಯವಾದರೂ ಏನು?**

—ಮಹೇಶಕುಮಾರ್, ಹುಬ್ಬಳ್ಳಿ

☆ ಹೌದು, ನೀವು ಹೇಳುವುದು ನಿಜ. ಮನಸ್ಸಿನಲ್ಲಿ ಯಾವುದಾದರೂ ಅಳುಕು, ಸಂದೇಹ, ಆತ್ಮವಿಶ್ವಾಸದ ಕೊರತೆ ಮತ್ತು ಭಗವದ್ ರಕ್ಷಣೆಯಲ್ಲಿ ಅಪನಂಬಿಕೆ—ಇವು ಜ್ಯೋತಿಷ್ಯ, ವಾಸ್ತು ಮುಂತಾದವುಗಳನ್ನು ನಂಬುವಂತೆ ಮಾಡುತ್ತವೆ. ಇವುಗಳೆಲ್ಲದರ ಹಿಂದೆ ವಾಣಿಜ್ಯ ಪ್ರವೃತ್ತಿ ಇರುವುದೂ ಸುಸ್ಪಷ್ಟ.

**? ತೀರ್ಥಂಕರ ಪಥಿಕರಿಗೆ 'ಜಿನಸ್ತುತಿ'ಯೇ ಶ್ರೇಷ್ಠ, ಬಸವಾನುಯಾಯಿಗಳಿಗೆ 'ಬಸವಮಂತ್ರ'ವೇ ಶ್ರೇಷ್ಠ; ಹೀಗಿರುವಾಗ, ಸರ್ವರಿಗೂ ಗಾಯತ್ರಿ ಮಂತ್ರವೇ ಸರ್ವಶ್ರೇಷ್ಠ ಎಂದು ಸಾಧಿಸಲು ಹೊರಟರೆ ಅದು ಸರಿಯೆ?** —ಮಹೇಶಕುಮಾರ್, ಹುಬ್ಬಳ್ಳಿ

☆ ಇಲ್ಲ, ಸರಿಯಲ್ಲ. ಅವರವರ ಮನೋಭಾವಕ್ಕೆ ಅನುಗುಣವಾಗಿ ಪ್ರತಿಯೊಬ್ಬರೂ ತಮ್ಮದೇ ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸಬೇಕು. ಧರ್ಮದಲ್ಲಿ ಬಲಾತ್ಕಾರ ಇರಕೂಡದು. "ಸ್ವಾತಂತ್ರ್ಯವೇ ಬೆಳವಣಿಗೆಯ ನಿಯಮ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಮತಾಂಧತೆಯೇ ಎಲ್ಲ ಧಾರ್ಮಿಕ ಕಲಹಗಳಿಗೂ ಕಾರಣ. ನಮ್ಮಲ್ಲಿ ಧಾರ್ಮಿಕ ವಿಶಾಲತೆ ಇರಬೇಕು. "ಕೇವಲ ಇತರ ಧರ್ಮಗಳನ್ನು ಸಹಿಸುವುದು ಮಾತ್ರವಲ್ಲ. ಸ್ವೀಕರಿಸುವ ಮನೋಭಾವ ಇರಬೇಕು" ಎಂದು ವಿವೇಕಾನಂದರು ಹೇಳುತ್ತಾರೆ. ಇದಕ್ಕೆ ನಾವು ಮತೀಯ ಚೌಕಟ್ಟಿನಿಂದ ಹೊರಬರಬೇಕು. ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರಂತೆ ನಾವು ವಿಶ್ವಮಾನವರಾಗಲು ಪ್ರಯತ್ನಿಸಬೇಕು. ಅಂದರೆ ನಮ್ಮ ನಮ್ಮ ಧರ್ಮವನ್ನು ಬಿಡಬೇಕೆಂದಲ್ಲ. ಜೈನರಿಗೆ 'ಜಿನಸ್ತುತಿ' ಶ್ರೇಷ್ಠ, ಬಸವಾನುಯಾಯಿಗಳಿಗೆ 'ಬಸವಮಂತ್ರ' ಶ್ರೇಷ್ಠ ಮತ್ತೆ ಕೆಲವರಿಗೆ ಗಾಯತ್ರೀ ಮಂತ್ರ ಶ್ರೇಷ್ಠ. ತಮ್ಮದನ್ನೂ ಬಿಡದೆ, ಇತರರದನ್ನೂ ಹಳಿಯದೆ ಇರುವುದೇ ಸುವರ್ಣ ಮಾಧ್ಯಮ.

✪